# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1317 |
| ಸದಸ್ಯರ ಹೆಸರು | : | ಶ್ರೀ ಎಸ್.ವಿ. ಸಂಕನೂರ |
| ಉತ್ತರಿಸುವ ದಿನಾಂಕ | : | 08-03-2022 |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ ಸಾರ್ವಜನಿಕ ಉದ್ದಿಮೆಗಳ ಸಚಿವರು. |

| ಕ್ರಮ ಸಂಖ್ಯೆ | ಪ್ರಶ್ನೆ | ಉತ್ತರ |
|---|---|---|
| ಅ. | ಗದಗ, ಬೆಟಗೇರಿ, ಹಾವೇರಿ, ಕಾರವಾರ, ಸಿರ್ಸಿ ನಗರ ಸಭೆಗಳಲ್ಲಿ ಮಂಜೂರಾದ ಎ.ಬಿ.ಸಿ.ಡಿ. ವೃಂದದ ಹುದ್ದೆಗಳೆಷ್ಟು; ಮತ್ತು ಸದ್ಯ ಕಾರ್ಯನಿರ್ವಹಿಸುತ್ತಿರುವ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು; (ವಿವರವಾದ ಮಾಹಿತಿ ನೀಡುವುದು) | ಗದಗ-ಬೆಟಗೇರಿ, ಹಾವೇರಿ, ಕಾರವಾರ, ಶಿರಸಿ ನಗರಸಭೆಗಳಲ್ಲಿ ಮಂಜೂರಾದ, ಕಾರ್ಯನಿರ್ವಹಿಸುತ್ತಿರುವ ಹಾಗೂ ಖಾಲಿ ಇರುವ ಹುದ್ದೆಗಳ ಸಂಖ್ಯೆಯ ವಿವರವನ್ನು ಅನುಬಂಧ ದಲ್ಲಿ ಲಗತ್ತಿಸಿದೆ. |
| ಆ. | ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದಲ್ಲಿನ ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಲಿಯಿರುವ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗಿರುತ್ತದೆ. ಅದರಂತೆ ಕರ್ನಾಟಕ ಲೋಕಸೇವಾ ಆಯೋಗದಿಂದ 1104 ನೇಮಕಾತಿ ಹುದ್ದೆಗಳಿಗೆ ಸ್ವೀಕೃತವಾದ ಅಂತಿಮ ಆಯ್ಕೆಪಟ್ಟಿಯನುಸಾರ 771 ಅಭ್ಯರ್ಥಿಗಳಿಗೆ ನೇಮಕಾತಿ ಆದೇಶ ನೀಡಲಾಗಿದ್ದು, ಉಳಿದ ಹುದ್ದೆಗಳ ನೇಮಕಾತಿ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ. ಇದಲ್ಲದೆ 553 ಹುದ್ದೆಗಳ ಅಂತಿಮ ಆಯ್ಕೆ ಪ್ರಕ್ರಿಯೆಯು ಕರ್ನಾಟಕ ಲೋಕಸೇವಾ ಆಯೋಗದಲ್ಲಿ ಚಾಲಿಯಲ್ಲಿದ್ದು, ಅಂತಿಮ ಆಯ್ಕೆಪಟ್ಟಿ ಸ್ವೀಕೃತವಾದ ಕೂಡಲೇ ದಾಖಲಾತಿ ಪರಿಶೀಲನೆ ಮಾಡಿ, ನೈಜತೆ ಪ್ರಮಾಣ ಪತ್ರವನ್ನಾಧರಿಸಿ ನೇಮಕಾತಿ ಆದೇಶ ನೀಡುವ ಮೂಲಕ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುವುದು.<br><br>ಮುಂದುವರೆದು, ಮುಂಬಡ್ತಿ ಖೋಟಾದಡಿಯಲ್ಲಿ ಖಾಲಿ ಇರುವ ಗ್ರೂಪ್ "ಬಿ" ಮತ್ತು "ಸಿ" ವೃಂದದ ಹುದ್ದೆಗಳನ್ನು ನಿಯಮಾನುಸಾರ ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. ಸರ್ಕಾರದ ಆದೇಶಗಳನುಸಾರ ಕೆಲವು ಹುದ್ದೆಗಳ ಸೇವೆಯನ್ನು ಹೊರಗುತ್ತಿಗೆ ಮತ್ತು ನೇರಪಾವತಿಯಡಿ ಪಡೆಯಲು ಅವಕಾಶವಿದ್ದು, ಅದರಂತೆ ಹೊರಗುತ್ತಿಗೆ ಮತ್ತು ನೇರನೇಮಕಾತಿಯಡಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮವಹಿಸಲಾಗುತ್ತಿದೆ. |

**ಸಂಖ್ಯೆ: ನಅಇ 20 ಎಲ್‌ಸಿಕ್ಯೂ 2022**

(ಎನ್.ನಾಗರಾಜು ಎಂ.ಟಿ.ಬಿ.)
ಮಾನ್ಯ ಪೌರಾಡಳಿತ ಮತ್ತು ಸಣ್ಣ ಕೈಗಾರಿಕೆ ಹಾಗೂ
ಸಾರ್ವಜನಿಕ ಉದ್ದಿಮೆಗಳ ಸಚಿವರು

# ಅನುಬಂಧ

| ಕ್ರ. ಸಂ. | ನಗರ ಸ್ಥಳೀಯ ಸಂಸ್ಥೆಯ ಹೆಸರು | ಮಂಜೂರಾಗಿರುವ ಹುದ್ದೆಗಳ ಸಂಖ್ಯೆ | | | | | ಕಾರ್ಯ ನಿರ್ವಹಿಸುತ್ತಿರುವ ಖಾಯಂ ನೌಕರರ ಸಂಖ್ಯೆ | | | | | ಖಾಲಿ ಹುದ್ದೆಗಳ ಸಂಖ್ಯೆ | | | | | ಗುತ್ತಿಗೆ/ಹೊರಗುತ್ತಿಗೆ/ನೇರಪಾವತಿ/ಸಮಾನ ಕೆಲಸಕ್ಕೆ ಸಮಾನ ವೇತನ/ದಿನಗೂಲಿಕ್ಷೇಮಾಭಿವೃದ್ಧಿ ನೌಕರರ ಸಂಖ್ಯೆ | | | | |
|---|---|---|---|---|---|---|---|---|---|---|---|---|---|---|---|---|---|---|---|---|---|
| | | Gr A | Gr B | Gr C | Gr D | Total | Gr A | Gr B | Gr C | Gr D | Total | Gr A | Gr B | Gr C | Gr D | Total | Gr A | Gr B | Gr C | Gr D | Total |
| 1 | ನಗರಸಭೆ ಗದಗ ಬೆಟಗೇರಿ | 4 | 5 | 93 | 357 | 459 | 0 | 2 | 39 | 193 | 234 | 4 | 3 | 54 | 164 | 225 | 1 | 0 | 65 | 74 | 140 |
| 2 | ನಗರಸಭೆ, ಹಾವೇರಿ | 4 | 4 | 67 | 162 | 237 | 2 | 3 | 15 | 44 | 64 | 2 | 1 | 52 | 118 | 173 | 1 | 0 | 4 | 91 | 96 |
| 3 | ನಗರಸಭೆ, ಕಾರವಾರ | 4 | 5 | 79 | 199 | 287 | 1 | 3 | 23 | 48 | 75 | 3 | 2 | 56 | 151 | 212 | 1 | 0 | 0 | 86 | 87 |
| 4 | ನಗರಸಭೆ, ಶಿರಸಿ | 4 | 4 | 67 | 162 | 237 | 2 | 2 | 23 | 53 | 80 | 2 | 2 | 44 | 109 | 157 | 1 | 0 | 33 | 62 | 96 |
| | ಒಟ್ಟು | 16 | 18 | 306 | 880 | 1220 | 5 | 10 | 100 | 338 | 453 | 11 | 8 | 206 | 542 | 767 | 4 | 0 | 102 | 313 | 419 |